



ಪುಸ್ತಕ ಪರಿಚಯ

# ‘ಅಂತರ್ಮುಖಿ’-ಸ್ವಾಮಿ ಬ್ರಹ್ಮಾನಂದರ ಸ್ಮೃತಿ ಸಂಕಲನ

**ದುರ್ಲಭಂ ತ್ರಯಮೇವೈತದ್ದೈವಾನುಗ್ರಹ ಹೇತುಕಂ ।**
**ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ ॥**

ಶ್ರೀಶಂಕರಾಚಾರ್ಯರು ಹೇಳುವಂತೆ ದೈವಾನುಗ್ರಹಲ್ಲದೆ ಮನುಷ್ಯಜನ್ಮ, ಮಹಾಪುರುಷರ ಆಸರೆ ದೊರಕುವುದು ಬಹಳ ಕಷ್ಟ.

ಮಾನವಶರೀರ ಸುಲಭವಾಗಿ ದೊರಕುವುದಿಲ್ಲ. ಎಷ್ಟೋ ಜನ್ಮಗಳ ಪುಣ್ಯದಿಂದ ದೊರಕಿದ ಈ ವಿಶಿಷ್ಟ ಮಾನವ ಶರೀರದ ಪ್ರಯೋಜನ ವಾದರೂ ಏನು? ಎಂದರೆ ಭಗವಂತನನ್ನು ಹೊಂದುವುದೇ ಇದರ ಪ್ರಯೋಜನ (ತ್ವತ್ಪ್ರಾಪ್ತ್ಯೈಕ ಪ್ರಯೋಜನಂ). ಈ ಜೀವಿತ ಅವಧಿಯಲ್ಲಿ ಪಡೆಯುವ ಮಿಕ್ಕ ಎಲ್ಲಾ ರೂಪ, ಆರೋಗ್ಯ, ಆಸ್ತಿ, ಅಧಿಕಾರ, ಅಂತಸ್ತು ಆನುಷಂಗಿಕವಾದವು. ಶ್ರೀರಾಮಕೃಷ್ಣರೂ ಭಗವಂತನ ನಾಮವೊಂದನ್ನು ಬಟ್ಟೆ ತುದಿಗೆ ಕಟ್ಟಿಕೊಂಡು ಎಲ್ಲವನ್ನೂ ಮಾಡಿ ಎನ್ನುತ್ತಾರೆ. ಗೀತಾಚಾರ್ಯ ಶ್ರೀಕೃಷ್ಣನೂ ‘ನನ್ನಲ್ಲಿ ಮನಸ್ಸು ಬುದ್ಧಿಗಳನ್ನರ್ಪಿಸಿ, ನನ್ನನ್ನೇ ನೆನೆಯುತ್ತಾ ಎಲ್ಲಾ ಕೆಲಸವನ್ನೂ ಮಾಡು’ ಎನ್ನುತ್ತಾನೆ. ಇಷ್ಟು ಮಾಡಲು ಮನಸ್ಸು-ಬುದ್ಧಿಗಳಿಗೆ ತರಬೇತಿ, ಸಾಧನೆ, ಅಭ್ಯಾಸ ಬೇಕು. ಅಂತಹ ಮಾರ್ಗದಲ್ಲಿ ಸಂಚರಿಸಿ ಅನುಭವ ಇರುವವರಿಂದಲ್ಲದೆ ಬೇರೆಯವರಿಂದ ಅದು ಹೇಗೆ ತಾನೆ ದೊರಕೀತು? ಶ್ರೀರಾಮಕೃಷ್ಣರ ಮಾನಸಪುತ್ರರಾದ ಸ್ವಾಮಿ ಬ್ರಹ್ಮಾನಂದರು ಇಂತಹ ಮಾರ್ಗದಲ್ಲಿ ಲೀಲಾಜಾಲ ಸಂಚಾರ ಹೊಂದಿದ್ದ ಬ್ರಹ್ಮಾನುಭವಿಗಳು. ಶ್ರೀರಾಮಕೃಷ್ಣರು ಅವರಿಗೆ ಸಾಧನಾಮಾರ್ಗದ ಅನೇಕ ರಹಸ್ಯಗಳನ್ನು ಉಪದೇಶಿಸಿದ್ದರು. ಸ್ವಾಮಿ ಬ್ರಹ್ಮಾನಂದರು ತಮ್ಮ ತಪೋಮಯ ಜೀವನದ ಕಠಿಣತಮ ಸಾಧನೆಯ ಪರಾಕಾಷ್ಠೆಯಿಂದ ಆ ಎಲ್ಲಾ ರಹಸ್ಯ ಮರ್ಮಗಳನ್ನೂ ಅನುಭವಿಸಿದ್ದರು. ಅವರು ಅದನ್ನು ತಮ್ಮ ಭಕ್ತರಿಗೆ, ಶಿಷ್ಯರಿಗೆ ಹೇಳಿಕೊಟ್ಟರು. ಹೀಗೆ ಸ್ವಾಮಿ ಬ್ರಹ್ಮಾನಂದರಿಂದ ಉಪದೇಶ ಪಡೆದು ಸಾಧನೆ ಮಾಡಿದ ಮಹಾತ್ಮರು ಅನೇಕರು. ಅವರೆಲ್ಲರ ಅನುಭವಗಳ ಲಿಖಿತ ರೂಪವೇ **‘ಅಂತರ್ಮುಖಿ.’** ಇದು ‘ಗುರುವತ್ ಗುರುಪುತ್ರ’ ಎಂದು ಸ್ವಾಮಿ ವಿವೇಕಾನಂದರಿಂದ ಗೌರವಿಸಲ್ಪಟ್ಟ ಸ್ವಾಮಿ ಬ್ರಹ್ಮಾನಂದರ ದಿವ್ಯಸ್ಮರಣೆಯೊಡಗೂಡಿದೆ.

**‘ಅಂತರ್ಮುಖಿ’** – ಹೆಸರೇ ಸೂಚಿಸುವಂತೆ, ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಅಂತಃಕರಣಗಳನ್ನೆಲ್ಲಾ ಒಳಸೆಳೆದು ತ್ಯಾಗಜೀವನದ, ಆಧ್ಯಾತ್ಮಿಕ ಆದರ್ಶದ ಸಾಕಾರಮೂರ್ತಿಯ, ಮಾತು-ಮನಗಳನ್ನು ಮೀರಿದ ಮೌನಸಾಮ್ರಾಜ್ಯದ ಪರಮಾನಂದ ಸಂಪೂರ್ಣ ಅಂತಸ್ಸಾಮ್ರಾಜ್ಯ ಸಾರ್ವಭೌಮನ ನಡೆಯನ್ನು ಬಿಂಬಿಸುತ್ತದೆ. ಇದರಲ್ಲಿ ಒಟ್ಟು ೭೦ ಲೇಖನಗಳಿವೆ. ಮೊದಲ ಭಾಗದ ೫೮ ಲೇಖನಗಳನ್ನು ‘ಉದ್ಬೋಧನ ಕಾರ್ಯಾಲಯ’ದಿಂದ ಪ್ರಕಟಿತವಾಗಿದ್ದ **‘ಬ್ರಹ್ಮಾನಂದೇರ್ ಸ್ಮತಿ ಕಥಾ’** ಕೃತಿಯಿಂದ ಭಾಷಾಂತರಿಸಲಾಗಿದೆ. ಎರಡನೇ ಭಾಗದ ೧೨ ಲೇಖನಗಳನ್ನು ‘Swami Brahmananda as We Saw Him’ ಎಂಬ ಶೀರ್ಷಿಕೆಯಲ್ಲಿ ರಾಮಕೃಷ್ಣ ಮಠ, ಚೆನ್ನೈ ಪ್ರಕಟಿಸಿರುವ ಕೃತಿಯಿಂದ ಭಾಷಾಂತರಿಸಲಾಗಿದೆ. ಅನುವಾದವು ಸರಳವೂ ಸುಂದರವೂ ಆಕರ್ಷಕವೂ ಆಗಿದೆ.

ಸ್ವಾಮಿ ವಿವೇಕಾನಂದರಿಂದ ‘ಆಧ್ಯಾತ್ಮಿಕ ಗಣಿ’, ‘ಆಧ್ಯಾತ್ಮಿಕ ಮೇರು ಶಿಖರ’ ಎಂದು ಗೌರವಿಸಲ್ಪಟ್ಟ ಸ್ವಾಮಿ ಬ್ರಹ್ಮಾನಂದರ ಮಾರ್ಗದರ್ಶನದಲ್ಲಿ ಸಾಧನೆ ಮಾಡಿದ ಸಂನ್ಯಾಸೀಶಿಷ್ಯರ ಅದ್ಭುತ ಅನುಭವಕಥನ ಮೈ ರೋಮಾಂಚನಗೊಳಿಸುತ್ತದೆ. ಅದ್ಭುತ, ಆಶ್ಚರ್ಯಕರ, ಆಕರ್ಷಕ ವಿಚಾರಗಳನ್ನು ಓದುತ್ತಾ ಓದುತ್ತಾ ಭಾವತನ್ಮಯತೆಯಲ್ಲಿ ಅದರಲ್ಲೇ ಮೈಮನಗಳು ಮರೆಯುತ್ತವೆ. ಸ್ವಾಮಿ ಬ್ರಹ್ಮಾನಂದರ ಗಂಭೀರ ಭಾವಮಯ ಅವಸ್ಥೆ, ಸದಾ ದೈವೀ ಭಾವಮತ್ತತೆ, ಪತಿತರನ್ನೂ ಉದ್ಧರಿಸುವ ಹೃದಯವೈಶಾಲ್ಯತೆ, ಸಂಸಾರದ ಕುಲುಮೆಯಲ್ಲಿ ಬೆಂದು ಬವಣೆಪಡುತ್ತಿರುವ ಜೀವಿಗಳ ದುಃಖೋಪಶಮನಕ್ಕೆ ಹಾತೊರೆಯುವ ಕರುಣಾರಸಾರ್ದ್ರತೆ, ಭಗವಂತನಿಗಾಗಿ ಜೀವ ಮುಡಿಪಿಟ್ಟವರ ಸೇವೆಯಲ್ಲಿ ತತ್ಪರತೆ ಮೊದಲಾದ ಮಹಾನ್ ಗುಣಗಳನ್ನು ಭಾವಿಸುತ್ತಾ ಓದುಗ ಅಥವಾ ಸಾಧಕ ಆ ಕ್ಷಣದಲ್ಲಿ ಆಧ್ಯಾತ್ಮಿಕ ಔನ್ನತ್ಯವನ್ನು ತನ್ನ ಅಂತರಂಗದಲ್ಲಿ ಅನುಭವಿಸುತ್ತಾನೆ.

ಆಧ್ಯಾತ್ಮಿಕ ಜೀವನ ನಡೆಸುವ ಬಯಕೆ ಇರುವವರು ಎದುರಿಸುವ ನಾನಾ ಸಮಸ್ಯೆಗಳ ಪರಿಹಾರಕ್ಕಾಗಿ ಸ್ವಾಮಿ ಬ್ರಹ್ಮಾನಂದರು ನೀಡಿರುವ ಉತ್ತಮ ಸಲಹೆಗಳು, ಮಾರ್ಗದರ್ಶನಗಳು, ಸುಲಭ ಉಪಾಯಗಳು, ಮತ್ತು ಅವರನ್ನು ಆ ಪಥದಲ್ಲಿ ಪ್ರೀತಿ-ಅನುಕಂಪೆ, ಭಾವ-ಭರವಸೆಗಳಿಂದ ಅವರು ಕೈಹಿಡಿದು ನಡೆಸಿದ ಅನುಭವ ಕಥನಗಳು ಆಧ್ಯಾತ್ಮಿಕ ಜೀವನಾವಲಂಬಿಯಾದ ಪ್ರತಿಯೊಬ್ಬರಿಗೂ ಕರಾವಲಂಬವಾಗುತ್ತವೆ.

ಭಗವಂತನೊಬ್ಬನೇ ಸರ್ವಸ್ವ, ಅವನೇ ಎಲ್ಲರ ಏಕಮಾತ್ರ ಸಂಪತ್ತು, ಆಸರೆ; ಅವನಿಗೆ ಶರಣಾಗಿ, ಅವನ ಸ್ಮರಣ-ಮನನಗಳಲ್ಲಿ ಜೀವಿತ ಧನ್ಯವಾಗಬೇಕು ಎಂಬ ಸ್ವಾಮಿ ಬ್ರಹ್ಮಾನಂದರ ಭಾವ ೬೦೦ ಪುಟಗಳ ಈ ಬೃಹದ್ಗ್ರಂಥದಲ್ಲಿ ಆದ್ಯಂತವಾಗಿ ಬೆಸೆದುಹೋಗಿದೆ. ಆ ಕಾರಣದಿಂದ ಈ ಕೃತಿ ಸಾಧಕರೆಲ್ಲರ ಕೈಪಿಡಿ. ಈಶ್ವರ ನಾಮೋಚ್ಚಾರಣೆ ಮತ್ತು ಮಹಿಮೆಗಳ ಕೀರ್ತನೆ ಮಾಡುತ್ತಾ ಭಗವಂತನನ್ನು ಸರ್ವದಾ ಸ್ಮರಣೆಮಾಡಿ ಜೀವನವನ್ನು ಸಾರ್ಥಕ ಮಾಡಿಕೊಂಡು ಪರಿಪೂರ್ಣತೆಯೆಡೆಗೆ ನಡೆದು ಸುಫಲರೂ ಸಫಲರೂ ಆಗುವಂತೆ ಪ್ರೇರೇಪಿಸುವಲ್ಲಿ ಈ ಕೃತಿ **‘ಅಂತರ್ಮುಖಿ’**ಯಾಗಿ ಸಾರ್ಥಕವಾಗಿದೆ. ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ ಮೈಸೂರು ಇಂತಹ ಮಹೋನ್ನತ ಮೇರು ಕೃತಿಯನ್ನು ಪ್ರಕಟಿಸಿ ಸಾಧಕಲೋಕಕ್ಕೆ ಮಹದುಪಕಾರ ಮಾಡಿದೆ.


*–ಡಾ. ಕೆ.ಎಲ್. ಪ್ರಸನ್ನಾಕ್ಷೀ*

ಕಥೆ: ಕೆ. ಸರಸ್ವತಿ

ಕಲೆ: ಶಂಕರ್

# ವಿಶ್ವಾಮಿತ್ರನ ಅನುಕಂಪ


**1** ಒಂದು ಸಲ ವಿಶ್ವಾಮಿತ್ರ ಋಷಿ ತನ್ನ ಶಿಷ್ಯರೊಂದಿಗೆ ಬರಪೀಡಿತ ಪ್ರದೇಶವನ್ನು ಹಾದುಹೋಗಬೇಕಾಗಿ ಬಂತು. ಅಲ್ಲಿ ಬಹಳ ಕಾಲದಿಂದ ಮಳೆಯಾಗಿರಲಿಲ್ಲ. ಆದಕಾರಣ ಅಲ್ಲೆಲ್ಲೂ ಮರಗಿಡಗಳು ಕಂಡುಬರಲಿಲ್ಲ.





**2** ವಿಶ್ವಾಮಿತ್ರ ತನ್ನ ಶಿಷ್ಯಂದಿರ ಹಸಿವನ್ನು ನೀಗಿಸಲು ದಾರಿ ಹುಡುಕಿದ.




**3** ಎಷ್ಟು ಹುಡುಕಿದರೂ ಶಿಷ್ಯಂದಿರಿಗೆ ಆಹಾರವೇನೂ ಸಿಗಲಿಲ್ಲ. ಬರಿಗೈಯಲ್ಲಿ ಮರಳಿದ ಅವರೆಂದರು –




**4** ಶಿಷ್ಯಂದಿರು ಹೋಗಿ ಸತ್ತ ನಾಯಿಯ ಶವವನ್ನು ಹೊತ್ತು ತಂದರು.
ವಿಶ್ವಾಮಿತ್ರರಿಗೆ ದುಃಖ, ಕೋಪ ಉಕ್ಕಿ ಬಂತು.




**5** ಸ್ವರ್ಗದಲ್ಲಿ ದೇವತೆಗಳ ಅಧಿಪತಿಯಾದ ಇಂದ್ರ ವಿಲಾಸದಲ್ಲಿ ಮುಳುಗಿದ್ದ.



**6** ವಿಶ್ವಾಮಿತ್ರನು ದೇವತೆಗಳಿಗೆ ಸತ್ತ ನಾಯಿಯ ಮಾಂಸವನ್ನು ಅರ್ಪಿಸಲು ಹೊರಟಿದ್ದಾನೆ ಎಂಬ ಸುದ್ದಿ ಸ್ವರ್ಗವನ್ನು ತಲುಪಿತು.



**7** ಅವರಿಗೆ ಆಹಾರ ಸಿಗದಿರಲು ನೀನೇ ಕಾರಣ ಎಂದು ವಿಶ್ವಾಮಿತ್ರ ತಿಳಿದುಕೊಂಡಿದ್ದಾನೆ. ನೀರಿಲ್ಲದೆ ಬರಗಾಲ, ಜನರ ಹಾಹಾಕಾರ ಇವಕ್ಕೆಲ್ಲ ನೀನೇ ಕಾರಣ ಎಂದು ಅವನು ತಿಳಿದುಕೊಂಡಿದ್ದಾನೆ.




**8** ಇಂದ್ರ ಗಿಡುಗನ ರೂಪದಲ್ಲಿ ವಿಶ್ವಾಮಿತ್ರನಿದ್ದ ಸ್ಥಳಕ್ಕೆ ಹೊರಟುಹೋದ. ಅವರ ಶಿಷ್ಯಂದಿರ ಕೈಯಲ್ಲಿದ್ದ ನಾಯಿಯ ಮಾಂಸದ ಪಾತ್ರೆಯನ್ನು ಅವನು ಮಿಂಚಿನಂತೆ ಅಪಹರಿಸಿದ.

ಗುರುಗಳೆ! ನಾಯಿಯ ಮಾಂಸ ಕಳೆದುಹೋಯಿತು! ಎಲ್ಲಿಂದಲೋ ಬಂದ ಗಿಡುಗ ನಮ್ಮ ಕೈಯಲ್ಲಿದ್ದ ನಾಯಿಮಾಂಸದ ಪಾತ್ರೆಯನ್ನು ಸೆಳೆದುಕೊಂಡು ಹೋಯಿತು!



**9** ವಿಶ್ವಾಮಿತ್ರನು ದಿವ್ಯದೃಷ್ಟಿಯಿಂದ, ಆ ಗಿಡುಗ ನಿಜವಾಗಿ ಇಂದ್ರನೇ ಎಂಬುದನ್ನು ಅರಿತ. ಅವನು ಕೋಪಗೊಂಡು...




**10** ವಿಶ್ವಾಮಿತ್ರನ ಕೋಪ, ಶಾಪ ಎರಡೂ ಪ್ರಸಿದ್ಧವಲ್ಲವೇ? ಹೆದರಿಹದ ಇಂದ್ರ ನಾಯಿಯ ಮಾಂಸವನ್ನು ಅಮೃತವನ್ನಾಗಿ ಪರಿವರ್ತಿಸಿದ. ಇದು ವಿಶ್ವಾಮಿತ್ರನ ಕೋಪವನ್ನು ಮತ್ತಷ್ಟು ಹೆಚ್ಚಿಸಿತು.